(ಇಂದು ದಿನಾಂಕಃ 09-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಕುಮಾರಿ ಎನ್.ಡಿ.ಕೆ. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಮುಂದುವರಿದ ಪಾಟೀ ಸವಾಲುಃ 1 ರಿಂದ 5, 18 ರಿಂದ 21 ಪ್ರತಿವಾದಿಯರ ಪರಃ ಶ್ರೀ ಎನ್.ಎಂ.ಎಂ. ವಕೀಲರಿಂದಃ**

ಮಹೇಶ್ ಇವರೊಂದಿಗೆ ಮದುವೆ ಮಾಡಿದಂತಹ ಭಟ್ಟರ ಹೆಸರು ಜೋಶಿ ಅವರ ಪೂರ್ಣ ಹೆಸರು ಗೊತ್ತಿಲ್ಲ. ಸದರಿ ಜೋಶಿ ಭಟ್ಟರು ಈಗ ಜೀವಿತವಾಗಿಲ್ಲ. ನನ್ನ ಮತ್ತು ಮಹೇಶ ಇವರ ಮದುವೆ ನೋಂದಣಿಯಾಗಿತ್ತು. ಮದುವೆಯಾದ ನಂತರ ನಾನು ಮಹೇಶ ಇವರೊಂದಿಗೆ ಮಾಜಾಳಿಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 18 ರಿಂದ 21 ಇವರನ್ನು ಯಾವ ಕಾರಣಕ್ಕಾಗಿ

ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಪತ್ರದಲ್ಲಿ ವಂಶವೃಕ್ಷದಲ್ಲಿ ಪ್ರತಿವಾದಿ ನಂ.18 ರಿಂದ 21 ಇವರನ್ನು ತೋರಿಸಿಲ್ಲ ಎಂದರೆ ಸರಿ. ದಿನಾಂಕ 10-02-2004 ರಂದು ಮೃತಪಟ್ಟ ನಂತರ ತಹಶೀಲ್ದಾರ ಕಚೇರಿಯಲ್ಲಿ ವಾರಿಸಾ ಮಾಡಲು ಅರ್ಜಿಯನ್ನು ಕೊಟ್ಟಿರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಕುಟುಂಬದ ಸದಸ್ಯರು ಕೊಡುತ್ತಾರೆ ಎಂದು ನಾನು ಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ನಂ. 18 ರಿಂದ 21 ರವರು ವಾರಿಸಾ ಅರ್ಜಿ ಕೊಟ್ಟು ವಾರಿಸಾ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ಅವರು ಸಂಬಂಧಿಕರು ಅಲ್ಲ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿದಂತಹ ಪಹಣಿಪತ್ರಿಕೆಗಳನ್ನು ಓದಿಸಿ ತಿಳಿದುಕೊಂಡಿದ್ದೇನೆ. ಪಹಣಿಗಳಲ್ಲಿ ಮೃತ ಮಹೇಶ ಇವರ ಕುಟುಂಬದ ಸದಸ್ಯರ ಹೆಸರುಗಳು ಇವೆ ಎಂದರೆ ಸರಿ. ಪಹಣಿಗಳಲ್ಲಿ ನನ್ನ ಹೆಸರು ಮತ್ತು ನನ್ನ ಮಗನ ಹೆಸರು ಇಲ್ಲ ಎಂದರೆ ಸರಿ. ಪ್ರತಿವಾದಿ ನಂ. 18 ರಿಂದ 21 ರವರ ಹೆಸರು ಪಹಣಿಗಳಲ್ಲಿ ಇದ್ದದ್ದು ಈ ದಾವೆ ಹಾಕುವ ಒಂದು ತಿಂಗಳು ಮೊದಲು ಗೊತ್ತಾಗಿದ್ದರಿಂದ ದಾವೆ ಹಾಕಿದ್ದೇನೆ. ಮೃತ ಮಹೇಶ ಇವರ ವಾರಿಸುದಾರರ ಹೆಸರುಗಳನ್ನು ಕಂದಾಯ ದಾಖಲಾತಿಯಲ್ಲಿ ನಮೂದಾಗಿದ್ದರಿಂದ ಎಲ್ಲಿಯೂ ಪ್ರಶ್ನಿಸಿಲ್ಲ. ದಾವಾ ಸ್ವತ್ತುಗಳಲ್ಲಿ ಮೃತ ಮಹೇಶ ಇವರಿಗೆ ಹಕ್ಕು ಇದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವರ ಕುಟುಂಬದವರು ಕೊಡುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಮೃತ ಮಹೇಶ ತನ್ನ ಜೀವಿತ ಕಾಲದಲ್ಲಿ 1998 ರಲ್ಲಿ ತಮ್ಮಂದಿರಿಗೆ ಹಕ್ಕು ಬಿಡುಗಡೆ ಮಾಡಿ ಆಸ್ತಿಗಳನ್ನು ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ದಾವೆ ಹೂಡಲು ಯಾವುದೇ ಹಕ್ಕು, ಸ್ವಾಮ್ಯತೆ ನನಗೆ ಇಲ್ಲ ಅನ್ನುವುದು ಸರಿಯಲ್ಲ. ಪಹಣಿಗಳಲ್ಲಿ ತುಕಾರಾಮ ಇವರ ವಾರಿಸುದಾರರನ್ನು ಹೊರತುಪಡಿಸಿ ಇನ್ನೂ ಉಳಿದ ಹಕ್ಕುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅನ್ನುವುದು ಸರಿಯಲ್ಲ. ಗಣಪಾ ರಾಮಾ ಸಾಳುಂಕೆ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿರಬಹುದು ನನಗೆ ಕನ್ನಡ ಸರಿಯಾಗಿ ಬರುವುದಿಲ್ಲ ಎಂದು ಹೇಳುತ್ತಾರೆ. ಸಾತಣ್ಣ ಕೃಷ್ಣಾ ನಾಯ್ಕು ಇವರ ಹೆಸರು ಪಹಣಿಯಲ್ಲಿ ಇದೆ ಎಂದರೆ ಸರಿ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿರಬಹುದು ನನಗೆ

ಕನ್ನಡ ಸರಿಯಾಗಿ ಬರುವುದಿಲ್ಲ ಎಂದು ಹೇಳುತ್ತಾರೆ. ಪಹಣಿಗಳಲ್ಲಿ ಇರುವ ಹೆಸರಿನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ದಾಖಲಾತಿಗಳನ್ನು ಕೊಟ್ಟಿದ್ದೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಪಹಣಿಯಲ್ಲಿರುವ ಹಕ್ಕುದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 02-06-1998 ರಲ್ಲಿ ರೂ, 72,000-00 ಗಳನ್ನು ಪಡೆದುಕೊಂಡು ತನ್ನ ಹಕ್ಕನ್ನು ತನ್ನ ಸಹೋದರರಿಗೆ ಬಿಟ್ಟು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಾನು ಮಹೇಶನೊಂದಿಗೆ ಯಾವತ್ತೂ ದಾಂಪತ್ಯ ಜೀವನ ನಡೆಸಿಲ್ಲ, ಅವನೊಂದಿಗೆ ವಾಸವಾಗಿಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ. ಪ್ರತಿವಾದಿ ನಂ.18 ರಿಂದ 21 ರವರು ಮೃತ ಮಹೇಶ ಇವರ ವಾರಿಸುದಾರರು ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ